ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಬಗ್ಗೆ

೨೭ (೧೯೦) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ಮಾಲೀಕರು ಕಾನೂನುಗಳನ್ನು ಉಲ್ಲಂಘಿಸಿದ್ದಾರೆಂಬುದನ್ನು ಪರಿಶೀಲಿಸಲು ಸರ್ಕಾರದವರು ಸಮಿತಿಯನ್ನು ರಚನೆ ಮಾಡಿದ್ದಾರೆಯೇ?

(ಆ) ಈ ಸಮಿತಿ ವರದಿ ಸಲ್ಲಿಸಿದೆಯೇ? ಸಲ್ಲಿಸಿದ್ದಲ್ಲಿ ಅದರ ಶಿಫಾರಸ್ಸುಗಳೇನು?

(ಇ) ಸರ್ಕಾರದವರು ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ) ಹೌದು.

(ಆ) ಹೌದು. ಸಮಿತಿಯು ಯಾವ ಪ್ರಸಂಗಗಳಲ್ಲಿ ಅಧಿನಿಯಮ ಮತ್ತು ನಿಯಮಗಳ ಉಲ್ಲಂಘನೆ ಆಗಿದೆಯೋ ಅಂತಹ ಪ್ರಸಂಗಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಮುಂದಿನ ಕ್ರಮ ತೆಗೆದು ಕೊಳ್ಳಬೇಕೆಂದು ಶಿಫಾರಸ್ಸು ಮಾಡಿದೆ.

(ಇ) ಸ್ಟುಡಿಯೋ ಆವರಣದಲ್ಲಿ ಬಾಡಿಗೆಗೆ ಇರತಕ್ಕ ಸಂಸ್ಥೆಗಳ ಉಚ್ಚಾಟನೆಗೆ ಕ್ರಮ ಕೈಗೊಳ್ಳಲಾಗಿದೆ.

ಪೋಲೀಸ್ ಠಾಣೆಗಳು

೨೭ (೨೦೪) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಪೋಲಿಸ್ ಠಾಣೆಗಳಿವೆ?

(ಆ) ಈ ಠಾಣೆಗಳನ್ನು ಯಾವ ಆಧಾರದ ಮೇಲೆ ಸ್ಥಾಪಿಸಲಾಗುವುದು?

(ಇ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಾಲ್ವಾರ ಗ್ರಾಮದಲ್ಲಿ ಒಂದು ಔಟ್‌ಪೋಸ್ಟ್ ಠಾಣೆಯನ್ನು ೧೯೪೪–೪೫ರಲ್ಲಿಯೇ ಸ್ಥಾಪಿಸಲು ಸರ್ಕಾರದವರು ಒಪ್ಪಿಕೊಂಡಿದ್ದು ಅದನ್ನು ಇದುವರೆಗೂ ಸ್ಥಾಪಿಸದಿರಲು ಕಾರಣವೇನು?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

(ಅ) ೬೬೧ ಪೋಲೀಸ್ ಠಾಣೆಗಳಿವೆ.

(ಆ) ಪೋಲಿಸ್ ಠಾಣೆಗಳನ್ನು ಮತ್ತು ಪೋಲಿಸ್ ಔಟ್ ಪೋಸ್ಟ್‌ಗಳನ್ನು ತೆರೆಯುವ ಬಗ್ಗೆ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸ್ಥಳೀಯ ಅಪರಾಧಗಳ ಸಂಖ್ಯೆ ಮತ್ತು ರಾಜಕೀಯ ವಾತಾವರಣ, ಮತೀಯ ಗಲಭೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಠಾಣೆಗಳನ್ನು ಮಂಜೂರು ಮಾಡಲಾಗಿದೆ.

(ಇ) ಹಂತ ಹಂತವಾಗಿ ಪೋಲಿಸ್ ಠಾಣೆಗಳನ್ನು ಮತ್ತು ಪೋಲಿಸ್ ಔಟ್ ಪೋಸ್ಟ್‌ಗಳನ್ನು ತೆರೆಯುವ ಬಗ್ಗೆ ಸಮಗ್ರ ಪೂರ್ವಯೋಜಿತ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ನಾಲ್ವಾರ ಗ್ರಾಮದಲ್ಲಿ ಔಟ್‌ಪೋಸ್ಟ್‌ನ್ನು ತೆರೆಯುವ ವಿಷಯವನ್ನು ಅದರೊಂದಿಗೆ ಪರಿಶೀಲಿಸಲಾಗುವುದು.

ರಾಜ್ಯ ರೆಸ್ಟ್ ಸಾರಿಗೆ ಸಂಸ್ಥೆ ಬಗ್ಗೆ

೨೮ (೧೫೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ, ಸಣ್ಣ ಉಳತಾಯ ಮತ್ತು ಬಂದೀಖಾನೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವರ್ಷ ಒಂದಕ್ಕೆ ಖರೀದಿಸುವ ಬಸ್ಸುಗಳ ಹಾಗೂ ಟಯರುಗಳ ಸಂಖ್ಯೆ ಎಷ್ಟು?

(ಆ) ಪ್ರತಿ ಸಾಲಿಗೆ ಬೇಕಾಗುವ ಒಟ್ಟು ಟೈರಿನ ಸಂಖ್ಯೆ ಎಷ್ಟು? ಹಾಗೂ ಹಾಳಾದ ಟೈರು ಗಳನ್ನು ಯಾವ ರೀತಿ ವಿಲೇವಾರಿ ಮಾಡಲಾಗುವುದು?

(ಇ) ಟೈರೊಂದರ ಬೆಲೆ ಎಷ್ಟಾಗುವುದು?

ಶ್ರೀ ವೀರಣ್ಣ (ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೮೫–೮೬ನೇ ಸಾಲಿನಲ್ಲಿ ಒಟ್ಟು ೧೩೪೮ ಹೊಸ ಬಸ್ಸುಗಳನ್ನು ಖರೀದಿಸಿದೆ. ಮತ್ತು ಮುಂದಿನ ವರ್ಷ ೧೯೮೬–೮೭ನೇ ಸಾಲಿನಲ್ಲಿ ಸುಮಾರು ೧೭೩೬ ಹೊಸ ಬಸ್ಸುಗಳನ್ನು ಸೇರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ, ೧೯೮೫–೮೬ನೇ ವರ್ಷ ದಲ್ಲಿ ೪೯,೧೭೨ ಹೊಸ ಟೈರುಗಳನ್ನು ಕೊಳ್ಳಲಾಯಿತು.

(ಆ) ೧೯೮೬–೮೭ರಲ್ಲಿ ಅಂದರೆ ೧ನೇ ಏಪ್ರಿಲ್ ೧೯೮೬ರಿಂದ ೩೧ನೇ ಮಾರ್ಚ್ ೧೯೮೭ರ ವರೆಗೆ ೪೯,೪೯೯ ಹೊಸ ಟೈರುಗಳು ಬೇಕಾಗುವ ನಿರೀಕ್ಷೆ ಇದೆ. ಅನುಪಯುಕ್ತ ಟೈರುಗಳನ್ನು ತಿಂಗಳಿಗೊಮ್ಮೆ ನಡೆಯುವ ಸಾರ್ವಜನಿಕ ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

(ಇ) ಈಗ ಕೊಳ್ಳುತ್ತಿರುವ ೯೦೦ ೨೦–೧೪ ಪ್ಲೈ ನೈಲಾನ್ ಟೈರು, ಟ್ಯೂಬ್ ಮತ್ತು ಫ್ಲಾಪ್ ಗಳ ಒಟ್ಟು ಬೆಲೆಯು (ತೆರಿಗೆಗಳು ಸೇರಿದಂತೆ) ಸರಾಸರಿ ೪೨೦೦.೦೦ ರೂ.ಗಳು.

ಹೋಟೆಲ್ ತಿಂಡಿಗಳ ಬೆಲೆ ಬೇರೆ ರಾಜ್ಯಗಳಿಗಿಂತ ಜಾಸ್ತಿಯಾಗಿರುವ ಬಗ್ಗೆ

೭೯ (೧೪೭) ಶ್ರೀ ಗೋಪಾಲ ಮುಕುಂದ ಕಾನಾಡೆ (ಖಿರ್ಸಿ).—ಮಾನ್ಯ ಕಾನೂನು, ಸಂಸದೀಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

(ಅ) ರಾಜ್ಯದ ಉಪಹಾರ ಗೃಹಗಳಲ್ಲಿನ ಬೆಲೆಗಳು ಇತರ ರಾಜ್ಯಗಳಲ್ಲಿನ ಬೆಲೆಗಳಿಗಿಂತ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಆ) ಹಾಗಿದ್ದಲ್ಲಿ ಅದನ್ನು ಕಡಿಮೆಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ನಾಗರೀಕ ಮಂತ್ರಿ ಗಳು).—

(ಅ) ಇಲ್ಲ.

(ಆ) ರಾಜ್ಯದಲ್ಲಿನ ಕೆಲವು ಹೋಟೆಲುಗಳಲ್ಲಿ ಬೆಲೆಗಳು ಜಾಸ್ತಿಯಾಗಿರುವುದು ಕಂಡು ಬಂದಿದೆ. ಕಳೆದ ಸುಮಾರು ಎರಡು ವರ್ಷಗಳಿಂದೀಚೆಗೆ ಈ ಹೆಚ್ಚಳ ಕಂಡುಬರುತ್ತಿದೆ. ಈ ವಿಷಯದಲ್ಲಿ ಸೂಕ್ತ ಸಲಹೆ ತೆಗೆದುಕೊಳ್ಳಲು ಸರ್ಕಾರದವರು ಒಂದು ಸಮಿತಿಯನ್ನು ರಚಿಸಿರುತ್ತಾರೆ. ಕಳೆದ ವರ್ಷ ತಿಂಡಿ ಪದಾರ್ಥಗಳ ಬೆಲೆ ಹೆಚ್ಚುವರಿಯನ್ನು ಗಮನಿಸಿ, ಮಾನ್ಯ ಆಹಾರ ಮಂತ್ರಿಗಳು ೧೯೮೫ನೇ ಮಾರ್ಚ್ ತಿಂಗಳಿನಲ್ಲಿ ಒಂದು ಸಭೆ ನಡೆಸಿ ಹೋಟೆಲ್ ಮಾಲೀಕರುಗಳಿಗೆ ತಿಳುವಳಿಕೆ ನೀಡಿ ತಿಂಡಿ ಪದಾರ್ಥಗಳ ಬೆಲೆಯನ್ನು ಹೆಚ್ಚಿಸದಂತೆ ಮನವಿ ಮಾಡಿಕೊಂಡರು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು ತಮ್ಮ ಸಂಕಷ್ಟಗಳನ್ನು ವಿವರಿಸಿ ಆಹಾರ ಪದಾರ್ಥಗಳು, ಎಣ್ಣೆ, ವಿದ್ಯುತ್, ಕೂಲಿ, ನೌಕರರ ಸಂಬಳ ಇವೆಲ್ಲ ಹೆಚ್ಚಿದ್ದರೂ ಸಹ ಅವರು ಇನ್ನು ಮುಂದೆ ಬೆಲೆಗಳನ್ನು ಹೆಚ್ಚಿಸುವುದಿಲ್ಲ ವೆಂದು ಆಶ್ವಾಸನೆ ಕೊಟ್ಟಿರುತ್ತಾರೆ. ಸರ್ಕಾರದ ವತಿಯಿಂದ ಹೋಟೆಲುಗಳಿಗೆ ಸೀಮೆಎಣ್ಣೆಯ ಹೊರತಾಗಿ ಮತ್ತಾವ ನಿಯಂತ್ರಿತ ಪದಾರ್ಥಗಳನ್ನು ಕೊಡುತ್ತಿಲ್ಲ. ಹೋಟೆಲ್‌ನವರು ತಮ್ಮ ಬೇಡಿಕೆಗಳನ್ನು ಮುಕ್ತ ಮಾರುಕಟ್ಟೆಯಲ್ಲೇ ಪಡೆದು ತಮ್ಮ ವ್ಯವಹಾರವನ್ನು ನಡೆಸಬೇಕಾಗಿರುತ್ತದೆ. ಆದುದರಿಂದ ಹಲವು ಬಾರಿ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಮತ್ತು ಖಾದ್ಯ ತೈಲಗಳ ಬೆಲೆಗಳು ಹೆಚ್ಚುವುದರಿಂದ ಹೋಟೆಲು ಮಾಲೀಕರುಗಳು ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಸಿದ ಸಂದರ್ಭ